**ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದಃ**

ನಾನು ಕಾಯಿ ಮಂಡಿ ವ್ಯಾಪಾರ ಮಾಡುತ್ತೇನೆ ಎಂದರೆ ಸರಿ. ದಾಸರಹಳ್ಳಿ ಜುಟ್ಟನಹಳ್ಳಿಯಲ್ಲಿ ಮಾಡುತ್ತೇನೆ. ಅಲ್ಲಿಗೂ ಕಸರನಹಳ್ಳಿಗೂ 1 ವರೆಯಿಂದ 2 ಕಿ.ಮೀ ಅಂತರ ಇದೆ. ಹಿರಿಸಾವೆಗೆ ನಮ್ಮ ಊರಿನಿಂದ 8 ರಿಂದ 9 ಕಿ.ಮೀ ಅಂತರ ಇದೆ. ನಾನು ಪ್ರತಿನಿತ್ಯವೂ ಕಾಯಿ ವ್ಯಾಪಾರಕ್ಕೆ ಹೋಗುವುದಿಲ್ಲ ಅನುಕೂಲಕ್ಕೆ ತಕ್ಕಂತೆ ಹೋಗುತ್ತೇನೆ. ವ್ಯವಸಾಯವನ್ನು ಮಾಡುತ್ತೇನೆ. ಚಂದಳ್ಳಿ ವಾಸುಕಿರವರು ನನಗೆ ಪರಿಚಿತರು ಎಂದರೆ ಸರಿಯಲ್ಲ. ಅವರು ನನಗೆ ಪರಿಚಿತರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಸಹಿಯನ್ನು ಗುರುತಿಸುತ್ತಾರೆ. ಪ್ರಮಾಣ ಪತ್ರದಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ ಯಾರು ಬರೆದಿರುತ್ತಾರೆ ಎಂದು ಗೊತ್ತಿಲ್ಲ. ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ ಮಹಜರ್ ಮಾಡಿರುತ್ತಾರೆ. ಮಹಜರ್ ಗೆ ಸಹಿಯನ್ನು ಪೋಲಿಸ್ ಠಾಣೆಗೆ ಕರೆಸಿ ಹಾಕಿಸಿಕೊಂಡಿರುತ್ತಾರೆ. ಮಹಜರ್ ನಲ್ಲ ಏನೆಲ್ಲಾ ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂಗಿಯವರು ಪರಿಹಾರ ಕೋರಿ ಕೇಸನ್ನು ಹಾಕಿರುತ್ತಾರೆ. ನನಗೆ ಸದರಿ ವಿಚಾರದ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂಗಿ, ತಂಗಿಯ ಮಕ್ಕಳು ಪುಸ್ತಕ ತರಲು ಹಿರಿಸಾವೆಗೆ ಹೋದಾಗ ಅಪಘಾತವಾಗಿರುತ್ತದೆ. ಆ ಮಕ್ಕಳು ನನ್ನ ಜೊತೆ ಇರುತ್ತಾರೆ. ನಾನು ಸಾಕ್ಷಿ ಹೇಳುತ್ತಿರುವುದು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೆಇಬಿ ಆಫೀಸ್ ಮುಂದೆ ತರಕಾರಿ ಅಂಗಡಿಗಳು ಇತರೆ ಅಂಗಡಿಗಳು ಇದೆ ಎಂದರೆ ಸರಿ. ಆಗ ಇರಲಿಲ್ಲ ಸ್ವಲ್ಪ ದೂರದಲ್ಲಿದ್ದವು. ಆ ರಸ್ತೆ ಬಹಳ ಬಿಜಿ ರಸ್ತೆ ಎಂದರೆ ಸರಿಯಲ್ಲ. ಅಲ್ಲಿ ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಕೆಇಬಿ ಕಚೇರಿ ಮುಂದೆ ರಸ್ತೆ ಕೆಲಸ ಮಾಡುತ್ತಿದ್ದ ಹಿನ್ನೆಲೆ ಜಿಸಿಬಿಗಳು ನಿಂತಿದ್ದವು ಎಂದರೆ ಸರಿಯಲ್ಲ. ನಾನು ನನ್ನ ತಂಗಿ ಜೊತೆ ಅಲ್ಲಿಗೆ ಹೋಗಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಫೋನ್ ಮಾಡಿ ತಿಳಿಸಿದ ಮೇರೆಗೆ ಅಘಘಾತ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿಯ ಅಪಘಾತ ನೋಡಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ಶಿಕ್ಷೆ ಆಗಿದೆ ಎಂದು ಸುಳ್ಳು ಹೇಳಿದ್ದು ಅವರಿಗೆ ಯಾವುದೇ ರೀತಿಯ ಶಿಕ್ಷೆ ಆಗಿರುವುದಿಲ್ಲ, ಪ್ರಮಾಣ ಪತ್ರದಲ್ಲಿ ಸುಳ್ಳು ಕಥೆಯನ್ನು ಸೃಷ್ಟಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,

ಚನ್ನರಾಯಪಟ್ಟಣ